ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ**: 07-04-2022.**

ಮುಂದುವರೆದ **ಪಾಟೀ ಸವಾಲು - ಪ್ರತಿವಾದಿ 2 ರಿಂದ 4 ರವರ ಪರ ಶ್ರೀ. ಜೆ.ವಿ.ಆರ್., ವಕೀಲರಿಂದ**

5) ನಾನು ಎಂಟು ಸ್ವತ್ತುಗಳ ಬಗ್ಗೆ ಈ ದಾವೆ ಹಾಕಿದ್ದೇನೆ. ಆ ಸ್ವತ್ತುಗಳ ಸರ್ವೆ ನಂಬರ್ ಗಳನ್ನು ಹೇಳಬಲ್ಲೆ, ಅವು ಸರ್ವೆ ನಂ.75-4, 35, 70-2 ಇಷ್ಟು ಮಾತ್ರ ಗೊತ್ತು. ಈ ಎಲ್ಲಾ ಆಸ್ತಿಗಳು ಕುರುಬರ ಹಳ್ಳಿಗೆ ಸೇರಿರುತ್ತವೆ. ನನಗೆ ಈಗ ವಯಸ್ಸು 59 ವರ್ಷ ಇರುತ್ತದೆ. ನನ್ನ ಮದುವೆ ದಿನಾಂಕವನ್ನು ಈಗ ಹೇಳಲು ಆಗುವುದಿಲ್ಲ. ನನ್ನ ಮದುವೆಯನ್ನು 1 ನೇ ಪ್ರತಿವಾದಿ ನೆರವೇರಿಸಿದ್ದರು ಎಂದರೆ ಇಲ್ಲ, ಗಂಡನ ಮನೆಯವರೇ ಮಾಡಿಕೊಂಡಿದ್ದರು. 1 ನೇ ಪ್ರತಿವಾದಿ ನನ್ನ ಮದುವೆ ಕಾಲಕ್ಕೆ ಒಡವೆ-ವಸ್ತ್ರಗಳನ್ನು ಕೊಟ್ಟು ಮದುವೆ ಮಾಡಿದ್ದರು ಎಂದರೆ ಸರಿಯಲ್ಲ. ಮದುವೆ ಖರ್ಚನ್ನು 1 ನೇ ಪ್ರತಿವಾದಿಯೇ ಭರಣ ಮಾಡಿದ್ದರೂ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಡವೆ-ವಸ್ತ್ರ ಕೊಟ್ಟಿದ್ದರೂ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಒಡವೆ ವಸ್ತ್ರಗಳನ್ನು ನನ್ನ ಅತ್ತೆ ಮನೆಯವರು ಕೊಟ್ಟಿದ್ದರು. ನನ್ನ ತಂದೆ ತೀರಿಕೊಂಡು 26 ವರ್ಷಗಳು ಕಳೆದಿರುತ್ತವೆ. ನನ್ನ ತಂದೆ ಮೃತ ಪಟ್ಟ ದಿನಾಂಕವನ್ನು ನನಗೆ ಹೇಳಲು ಆಗುವುದಿಲ್ಲ. 1 ನೇ ಪ್ರತಿವಾದಿ ಮೃತ ಪಟ್ಟು 10 ವರ್ಷಗಳು ಆಗಿರುತ್ತವೆ ಆದರೆ ನಿಖರವಾದ ದಿನಾಂಕ ಗೊತ್ತಿಲ್ಲ. ದಾವಾ ಸ್ವತ್ತುಗಳ ಖಾತೆಯನ್ನು ನನ್ನ ಅಣ್ಣ 1 ನೇ ಪ್ರತಿವಾದಿ ಮೃತ ಪಟ್ಟ ನಂತರ ಆತನ ಮಕ್ಕಳೇ ಅವರ ಹೆಸರಿಗೆ ಮಾಡಿಸಿಕೊಂಡಿದ್ದಾರೆ. 2 ರಿಂದ 4 ನೇ ಪ್ರತಿವಾದಿಗಳ ಹೆಸರಿಗೆ ಡ 1996 ರಂದೇ ಖಾತೆ ಬದಲಾವಣೆ ಆಗಿತ್ತು ಎಂದರೆ ಸರಿ. 1996 ರಲ್ಲೇ ದಾವಾ ಸ್ವತ್ತುಗಳ ಪಹಣಿಗಳು 2 ರಿಂದ 4 ನೇ ಪ್ರತಿವಾದಿಗಳ ಹೆಸರುಗಳಿಗೆ ನಮೂದಾಗಿದ್ದವು ಎಂದರೆ ಸರಿ. ನಾನು ಅವರ ಹೆಸರುಗಳಿಗೆ ಖಾತೆ ಬದಲಾವಣೆಯಾಗಿದ್ದನ್ನು ಸಂಬಂಧಪಟ್ಟ ಕಂದಾಯ ಅಧಿಕಾರಿಗಳ ಮುಂದೆ ಪ್ರಶ್ನಿಸಲಿಲ್ಲ ಎಂದರೆ ನನಗೆ ಗೊತ್ತಿರಲಿಲ್ಲ. ಅವರ ಹೆಸರುಗಳಿಗೆ ಖಾತೆ ಬದಲಾವಣೆ ಆಗಿದ್ದು ನನಗೆ ಗೊತ್ತಿದ್ದರೂ ಗೊತ್ತಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6) ನನ್ನ ಗಂಡನ ಹೆಸರು ರಂಗಪ್ಪ. ನನಗೆ 3 ಜನ ಮಕ್ಕಳು, ಅವರುಗಳು ರಮೇಶ್, ಮಂಜಮ್ಮ ಮತ್ತು ಮಾಲಾ. ನನ್ನನ್ನು ಮಾರೇನಹಳ್ಳಿಗೆ ಕೊಟ್ಟು ಮದುವೆ ಮಾಡಿದ್ದರು. ನನ್ನ ಗಂಡನ ಮನೆ ಕಡೆ ಅನುಕೂಲವಾಗಿದ್ದಾರೆ ಎಂದರೆ ಸರಿ. ನನ್ನ ಗಂಡನ ಕುಟುಂಬಕ್ಕೆ ಎರಡೂವರೆ ಎಕರೆ ಜಮೀನು ಇದೆ. ನನ್ನ ಗಂಡನ ಮನೆ ಕಡೆ ಅನುಕೂಲಕರವಾಗಿದ್ದರೂ ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳುದಾವೆ ಹಾಕಿದ್ದೇನೆ ಎಂದರೆ ತವರು ಮನೆಯ ಆಸ್ತಿ ನನಗೆ ಬೇಡವೇ? ಎಂದು ಮರು ಪ್ರಶ್ನೆ ಮಾಡುತ್ತಾರೆ. ನನಗೆ ತವರು ಮನೆ ಆಸ್ತಿ ಮೇಲೆ ಹಕ್ಕು ಇಲ್ಲದಿದ್ದರೂ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1996 ರಲ್ಲೇ 2 ರಿಂದ 4 ನೇ ಪ್ರತಿವಾದಿಗಳ ಹೆಸರಿಗೆ ಕಂದಾಯ ದಾಖಲೆಗಳು ಬದಲಾವಣೆಯಾಗಿದ್ದರೂ ಕೂಡ 2012 ರ ವರೆಗೆ ದಾವೆ ಹಾಕದೇ ಇರುವ ಕಾರಣದಿಂದ ನನಗೆ ಈ ದಾವಾ ಹಾಕಲು ಕಾಲ ಪರಿಮಿತಿ ಇರುವುದಿಲ್ಲ ಎಂದರೆ ನನಗೆ ಖಾತೆ ಬದಲಾವಣೆ ಬಗ್ಗೆ ಗೊತ್ತಿರಲಿಲ್ಲ. ನಾನು ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ದಾವೆ ತಂದಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲಾ.

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**